ಶ್ರೀ ಎಸ್. ಸುರೇಶ್‌ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಶ್ರೀ ವೆಂಕಟರಮಣಪ್ಪ (ಸಣ್ಣ ಕೈಗಾರಿಕೆ ಮತ್ತು ರೇಷ್ಮೆ ಸಚಿವರು) ಅವರ ಪರವಾಗಿ

1956ರ ಕಂಪನಿ ಅಧಿನಿಯಮದ 619(ಎ)(2) ಪ್ರಕರಣದ ಮೇರೆಗೆ:

1. ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತದ 2007–08ನೇ ಸಾಲಿನ 48ನೇ ವಾರ್ಷಿಕ ಮತ್ತು ಲೆಕ್ಕಪರಿಶೋಧನಾ ವರದಿಯನ್ನು ಮಂಡಿಸುತ್ತೇನೆ.

ಉಪಾಧ್ಯಕ್ಷರು : ಮಂಡಿಸಲಾಯಿತು.

4. ಸಚಿವರ ಹೇಳಿಕೆ

ಅ) ವಿಷಯ: ರಾಜ್ಯದಲ್ಲಿ ಉಂಟಾಗಿರುವ ಪ್ರವಾಹ. ಹಾನಿ ಕುರಿತಂತೆ ಕಂದಾಯ ಸಚಿವರ ಹೇಳಿಕೆ.

* ರಾಜ್ಯದಲ್ಲಿ ಮುಂಗಾರು ಮಳೆಯು 1ನೇ ಜೂನ್ ರಿಂದ 16ನೇ ಜುಲೈ ವರೆವಿಗೆ ವಾಡಿಕೆಯಂತೆ 328 ಮಿ.ಮೀ. ಮಳೆ ಆಗಬೇಕಿದ್ದು, ಪ್ರಸ್ತುತದವರೆಗೆ 391 ಮಿ.ಮೀ. ಮಳೆಯಾಗಿದ್ದು ಶೇಕಡಾ 19ರಷ್ಟು ಅಧಿಕವಾಗಿರುತ್ತದೆ. ಕಳೆದ ವರ್ಷದ ಇದೇ ಅವಧಿಗೆ ಶೇ. 33ರಷ್ಟು ಕೊರತೆ ಇತ್ತು.

* ಜೂನ್ ತಿಂಗಳಲ್ಲಿ ಒಟ್ಟು ವಾಡಿಕೆ ಮಳೆ 189 ಮಿ.ಮೀ. ಆಗಬೇಕಾಗಿದ್ದು, 156 ಮಿ.ಮೀ. ಮಳೆ ಆಗಿರುತ್ತದೆ. ಇದು ಶೇ. 18ರಷ್ಟು ಕೊರತೆ ಉಂಟಾಗಿತ್ತು. ಜುಲೈ ತಿಂಗಳಿನ 16ನೇ ತಾರೀಖಿನವರೆಗೆ 139 ವಾಡಿಕೆ ಮಳೆ ಆಗಬೇಕಿದ್ದು, 235 ಮಿ.ಮೀ. ಮಳೆ ಆಗಿದ್ದು ಇದು ಶೇ. 69ರಷ್ಟು ಅಧಿಕವಾಗಿರುತ್ತದೆ.

* ಮಲೆನಾಡು ಪ್ರದೇಶದಲ್ಲಿ (ಕೊಡಗು, ಹಾಸನ, ಚಿಕ್ಕಮಗಳೂರು, ಶಿವಮೊಗ್ಗ) ವಾಡಿಕೆ ಮಳೆಯು ಜುಲೈ 16ರವರೆಗೆ 280

ಮಿ.ಮೀ. ನಷ್ಟಿದ್ದು, 569 ಮಿ.ಮೀ. ಮಳೆ ಆಗಿರುತ್ತದೆ. ಇದು ಶೇ. 103ರಷ್ಟು ಅಧಿಕವಾಗಿರುತ್ತದೆ. ಜುಲೈ 2 ರಿಂದ 8ನೇ ತಾರೀಖಿನವರೆಗೆ ಮಲೆನಾಡು ಪ್ರದೇಶದಲ್ಲಿ ಆದ ಮಳೆಯು ಕಳೆದ 29 ವರ್ಷಗಳಿಗೆ ಹೋಲಿಕೆ ಮಾಡಿದಲ್ಲಿ ಅತ್ಯಧಿಕವಾಗಿರುತ್ತದೆ.

* ಕರಾವಳಿ ಪ್ರದೇಶದಲ್ಲಿ (ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ) ವಾಡಿಕೆ ಮಳೆಯು ಜುಲೈ 16ರವರೆಗೆ 564 ಮಿ.ಮೀ. ನಷ್ಟಿದ್ದು, 999 ಮಿ.ಮೀ. ಮಳೆ ಆಗಿರುತ್ತದೆ. ಇದು ಶೇ. 77ರಷ್ಟು ಅಧಿಕವಾಗಿರುತ್ತದೆ. ಜುಲೈ 2 ರಿಂದ 8ನೇ ತಾರೀಖಿನವರೆಗೆ ಕರಾವಳಿ ಪ್ರದೇಶದಲ್ಲಿ ಆದ ಮಳೆಯು ಕಳೆದ 39 ವರ್ಷಗಳಿಗೆ ಹೋಲಿಕೆ ಮಾಡಿದಲ್ಲಿ ಅತ್ಯಧಿಕವಾಗಿರುತ್ತದೆ.

* ಅಧಿಕ ಮಳೆಯಾಗಿರುವ 11 ಜಿಲ್ಲೆಗಳ ವಿವರ (1.7.09 ರಿಂದ 16.7.09ರವರೆಗೆ)

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ವಾಡಿಕೆ ಮಳೆ (ಮಿಮೀ)	ಆಗಿರುವ ಮಳೆ (ಮಿಮೀ)	ಶೇಕಡಾವಾರು ವ್ಯತ್ಯಾಸ (%)
1	ಉಡುಪಿ	652	1231	89
2	ದಕ್ಷಿಣ ಕನ್ನಡ	622	1022	64
3	ಉತ್ತರ ಕನ್ನಡ	513	925	80
4	ಕೊಡಗು	392	883	125
5	ಶಿವಮೊಗ್ಗ	359	778	117
6	ಚಿಕ್ಕಮಗಳೂರು	333	600	80
7	ಹಾಸನ	123	242	97

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ವಾಡಿಕೆ ಮಳೆ (ಮಿಮೀ)	ಆಗಿರುವ ಮಳೆ (ಮಿಮೀ)	ಶೇಕಡಾವಾರು ವ್ಯತ್ಯಾಸ (%)
8	ಬೆಳಗಾಂ	115	212	84
9	ಹಾವೇರಿ	95	190	100
10	ಧಾರವಾಡ	83	145	75
11	ಚಿತ್ರದುರ್ಗ	49	103	111

* ಹೆಚ್ಚು ಮಳೆ ಮತ್ತು ಪ್ರವಾಹ ಉಂಟಾಗುತ್ತಿರುವ ಜಿಲ್ಲೆಗಳಲ್ಲಿ ಪ್ರವಾಹ ಪರಿಸ್ಥಿತಿ ಎದುರಿಸಲು ಎಲ್ಲಾ ಸಿದ್ಧತೆಗಳನ್ನು ಮಾಡಿಕೊಂಡು ಸನ್ನದ್ಧರಾಗಿರುವಂತೆ ಜಿಲ್ಲಾಡಳಿತಕ್ಕೆ ಈಗಾಗಲೇ ಸೂಚನೆ ನೀಡಲಾಗಿದೆ. ಅದರಂತೆ ನಿಯಂತ್ರಣ ಕೊಠಡಿಗಳನ್ನು ಪ್ರಾರಂಭಿಸಿ, ವೈಯರ್‌ಲೆಸ್ ಸಂಪರ್ಕ ಅಳವಡಿಸಿಕೊಂಡು ಕಾರ್ಯ ಸನ್ನದ್ಧರಾಗಿರುತ್ತಾರೆ. ಅಗತ್ಯ ಪ್ರದೇಶಗಳಲ್ಲಿ ರಕ್ಷಣಾ ತಂಡಗಳನ್ನು ರಚಿಸಿ ಮೇಲ್ವಿಚಾರಣೆ ನಡೆಸುತ್ತಿದ್ದಾರೆ.

* ಪ್ರವಾಹ ಮುನ್ನೆಚ್ಚರಿಕೆ ಕ್ರಮವಾಗಿ ಉತ್ತರ ಕನ್ನಡ, ದಕ್ಷಿಣ ಕನ್ನಡ, ಉಡುಪಿ, ಕೊಡಗು, ಶಿವಮೊಗ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಪ್ರವಾಹ ಭಾದಿತರನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಿ ಅಗತ್ಯ ಊಟ, ವಸತಿ ಮತ್ತು ಔಷಧೋಪಚಾರಗಳನ್ನು ಒದಗಿಸಲಾಗಿದೆ.

* ಕರಾವಳಿ ಜಿಲ್ಲೆಗಳಿಗೆ ಹೆಚ್ಚುವರಿಯಾಗಿ ರಕ್ಷಣಾ ಕೆಲಸಕ್ಕೆ ತಮಿಳುನಾಡಿನ ಅರಕೋಣಂನಿಂದ ನ್ಯಾಷನಲ್ ಡಿಸಾಸ್ಟರ್ ರೆಸ್ಪಾನ್ಸ್ ಫೋರ್ಸ್‌ನ 89 ಅಧಿಕಾರಿ ಮತ್ತು ಸಿಬ್ಬಂದಿಯವರನ್ನು ಮತ್ತು 11 ಇನ್‌ಫ್ಲೇಟಬಲ್ ಬೋಟ್ಸ್‌ಗಳನ್ನು ವಿವಿಧ ಸುರಕ್ಷಿತ ಕೆಲಸಗಳಿಗೆ ಬಳಸಲಾಗುತ್ತಿದೆ.

* ಮಳೆ ಸಿಡಿಲು ಹಾಗೂ ಪ್ರವಾಹದಿಂದ ಜೂನ್ ತಿಂಗಳಲ್ಲಿ 57 (51 ಸಿಡಿಲು + 6 ಮಳೆ/ಪ್ರವಾಹ) ಮತ್ತು ಜುಲೈ ತಿಂಗಳಲ್ಲಿ ಈ ತನಕ 17 (1 ಸಿಡಿಲು + 16 ಮಳೆ/ಪ್ರವಾಹ) ಮಾನವ ಪ್ರಾಣಹಾನಿ ಆಗಿದೆ. ಇದೇ ರೀತಿ 268 ಮತ್ತು 38 ಜಾನುವಾರುಗಳ ಹಾನಿ ಆಗಿದೆ. ಮನೆಗಳು 734 ಮತ್ತು 731 ಹಾನಿಗೊಳಗಾಗಿವೆ.

* ಈಗ ಭಾರಿ ಮಳೆ ಮತ್ತು ಪ್ರವಾಹದಿಂದ ಇತ್ತೀಚಿನ ಬೆಳೆ, ಮನೆ, ಜಾನುವಾರು ಮತ್ತು ಮೂಲಭೂತ ಸೌಕರ್ಯಗಳ ಹಾನಿಯ ಬಗ್ಗೆ ಅಂದಾಜು ಮಾಡುವ ಕಾರ್ಯವು ಕುಂಠಿತವಾಗಿದೆ.

* ಪ್ರಕೃತಿ ವಿಕೋಪದ ಹಾನಿಯ ತುರ್ತು ಪರಿಹಾರಕ್ಕಾಗಿ ಲಭ್ಯವಿರುವ ಹಣವನ್ನು ಬಳಸಿಕೊಳ್ಳಲು ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ. ಈಗ ಉತ್ತರಕನ್ನಡ, ಉಡುಪಿ, ದಕ್ಷಿಣಕನ್ನಡ, ಕೊಡಗು, ಶಿವಮೊಗ್ಗ ಹಾಗೂ ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಭಾರಿ ಮಳೆಯಾಗುತ್ತಿದ್ದು ಈ ಜಿಲ್ಲೆಗಳಿಗೆ ತಲಾ 5 ಕೋಟಿಗಳಂತೆ ಅನುದಾನ ಬಿಡುಗಡೆ ಮಾಡಲಾಗುತ್ತಿದೆ. ಉಳಿದ ಜಿಲ್ಲೆಗಳಿಗೂ ಹಾನಿಗಳ ಪರಿಹಾರಕ್ಕೆ ಅಗತ್ಯಕ್ಕೆ ಅನುಗುಣವಾಗಿ ರೂ. 1 ಕೋಟಿಯಿಂದ 2 ಕೋಟಿವರೆವಿಗೂ ಅನುದಾನ ಬಿಡುಗಡೆ ಬಗ್ಗೆ ಕ್ರಮಕೈಗೊಳ್ಳಲಾಗಿದೆ. ಮಾನ್ಯ ಉಪಾಧ್ಯಕ್ಷರೆ, ಇದರಲ್ಲಿ ಮುಖ್ಯವಾಗಿ ಯಾವ ತಾಲ್ಲೂಕು, ಕ್ಷೇತ್ರಗಳಲ್ಲಿ ಮಳೆಯಿಂದ ಹಾನಿಯಾಗಿದೆ. ಹಣವನ್ನು ಅಲ್ಲಿಗೆ ಬಳಸಿಕೊಳ್ಳುವುದಕ್ಕೆ ಜಿಲ್ಲಾಧಿಕಾರಿಗಳಿಗೆ ಸೂಚನೆಯನ್ನು ಕೊಟ್ಟಿದ್ದೇನೆ.

* ರಾಜ್ಯದಲ್ಲಿ 2008–09ರಲ್ಲಿ ಇದ್ದ ಬರ ಪರಿಸ್ಥಿತಿಯ ಹಿನ್ನಲೆಯಲ್ಲಿ 21 ಜಿಲ್ಲೆಗಳ 84 ತಾಲ್ಲೂಕುಗಳನ್ನು ಬರಪೀಡಿತ ಎಂದು ಘೋಷಿಸಿ ಪರಿಹಾರ ಒದಗಿಸಲು ರೂ. 2,019.55

ಕೋಟಿ ಆರ್ಥಿಕ ನೆರವನ್ನು ಕೋರಿ ಕೇಂದ್ರ ಸರ್ಕಾರಕ್ಕೆ 10.9.2008ರಂದು ನಿಯೋಗದಲ್ಲಿ ತೆರಳಿ ಮನವಿ ನೀಡಿದ್ದು, ಕೇಂದ್ರ ಸರ್ಕಾರದ ಪರಿಗಣನೆಯಲ್ಲಿದ್ದು, ಈ ತನಕ ಹಣ ಬಿಡುಗಡೆಯಾಗಿರುವುದಿಲ್ಲ.

* ಇದೇ ರೀತಿ ಮಳೆ ಹಾಗೂ ಪ್ರವಾಹ ಹಾನಿಗೆ ಪರಿಹಾರ ಒದಗಿಸಲು ರೂ. 516.72 ಕೋಟಿ ನೆರವು ಕೋರಿ ಕೇಂದ್ರ ಸರ್ಕಾರಕ್ಕೆ 10.9.08ರಂದೇ ಮನವಿ ನೀಡಲಾಗಿದೆ. ಈ ಬಗ್ಗೆ ಎನ್.ಸಿ.ಸಿ.ಎಫ್. ಅಡಿಯಲ್ಲಿ ರೂ. 1.86 ಕೋಟಿ ಮಾತ್ರ ಬಿಡುಗಡೆಯಾಗಿರುತ್ತದೆ. 2005–06 ರಿಂದ 2009–10ರ ವರೆಗೆ ಕೇಂದ್ರದ ವಿಕೋಪ ಪರಿಹಾರ ನಿಧಿಯಿಂದ ಕರ್ನಾಟಕಕ್ಕಿಂತ ಶೇ. 300ರಷ್ಟು ಆಂದ್ರಪ್ರದೇಶಕ್ಕೂ ಶೇ. 182ರಷ್ಟು ತಮಿಳುನಾಡಿಗೆ, ಶೇಕಡಾ 122ರಷ್ಟು ಪಂಜಾಬ್ ರಾಜ್ಯಗಳಿಗೆ ಹಂಚಿಕೆಯಾಗಿದ್ದು ಕರ್ನಾಟಕಕ್ಕೆ ಅನ್ಯಾಯವಾದಂತಾಗಿದೆ. ಆದರೆ ನೂತನ ಕೇಂದ್ರ ಸರ್ಕಾರವು ನಮ್ಮ ಬೇಡಿಕೆಗಳಿಗೆ ಸಕಾರಾತ್ಮಕವಾಗಿ ಸ್ಪಂದಿಸುತ್ತದೆಂದು ನಾವು ನಂಬಿದ್ದೇವೆ.

* ಈ ರೀತಿಯ ಪ್ರವಾಹ ಮತ್ತು ನೈಸರ್ಗಿಕ ವಿಕೋಪಗಳ ಬಗ್ಗೆ ಸಾರ್ವಜನಿಕರಿಗೆ ಪೂರ್ಣ ರೀತಿಯ ಸುರಕ್ಷತೆ ಮತ್ತು ಪರಿಹಾರವನ್ನು ಒದಗಿಸಲು ನಮ್ಮ ಸರ್ಕಾರವು ಬದ್ಧವಾಗಿದೆ. ಇದಕ್ಕೆ ಇರುವಂತಹ ಎಲ್ಲಾ ರೀತಿಯ ಮುನ್ನೆಚ್ಚರಿಕೆ ಕ್ರಮಗಳನ್ನು ಮತ್ತು ಪರಿಹಾರ ನೀಡಲಿರುವ ಬಗ್ಗೆ ಜಿಲ್ಲಾ ಆಡಳಿತದ ಜೊತೆಯಲ್ಲಿ ನಿರಂತರ ಸಂಪರ್ಕದಲ್ಲಿದ್ದು, ಇದನ್ನು ಬಹಳ ಗಂಭೀರತೆಯಿಂದ ನಿರ್ವಹಿಸಲಾಗುತ್ತಿದೆ. ಇದಕ್ಕೆ ಎಲ್ಲಾ ಗೌರವಾನ್ವಿತ ಶಾಸಕರುಗಳ, ಜನಪ್ರತಿನಿಧಿಗಳ ಮತ್ತು ಎನ್.ಜಿ.ಓ.ಗಳ ಸಹಾಯ ಮತ್ತು ಸಹಕಾರವನ್ನು ಪಡೆದುಕೊಳ್ಳಲಾಗುತ್ತಿದೆ.